ಪಿ.ಡಬ್ಲ್ಯೂ: 01.

ದಿನಾಂಕಃ 29-05-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀಃ ಬಿಎಎಸ್ ವಕೀಲರಿಂದಃ

ನಾನು ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದೃಢೀಕೃತ ಖುಲಾಸೆ ಪತ್ರ, ವಂಶವೃಕ್ಷ, ಎರಡು ಮ್ಯುಟೇಷನ್ ರಿಜಿಸ್ಟರ್ ಪ್ರತಿ, ಎಂಟು ಆರ್.ಟಿ.ಸಿ ಗಳು, ಒಂದು ದೃಢೀಕೃತ ಆರ್.ಟಿ.ಸಿ, ಕಂದಾಯ ರಶೀದಿ, ಪೊಲೀಸ್ ಸ್ವೀಕೃತಿ, ಬಿಳಿಕೆರೆ ಪೊಲೀಸ್ ಠಾಣೆಯ ಹಿಂಬರಹ ಪ್ರತಿ, ಜಮೀನು ಹಕ್ಕಿನ ದಾಖಲೆ ರಿಜಿಸ್ಟರ್, ನೋಟೀಸ್ ಪ್ರತಿ, ಅಂಚೆ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-**1** ರಿಂದ **19** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಲಾಗಿ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.